ಓಎಸ್ 164/2018

**ಡಿಡಬ್ಲ್ಯೂ: 01**

ದಿನಾಂಕಃ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಬಿ ಸಿ ಎಸ್ ವಕೀಲರಿಂದಃ**

ನನ್ನ ತಾತ ನಂಜೇಗೌಡ, ಅಜ್ಜಿ ಸಣ್ಣಮ್ಮ. ಅವರಿಗೆ 11 ಜನ ಮಕ್ಕಳು, ಅವರುಗಳೆಂದರೆ ರಾಜು, ಯಶೋಧ, ನಾಗರಾಜೇಗೌಡ, ನಿಂಗರಾಜು, ಮಾದೇವ, ರಾಮ, ಕೃಷ್ಣ, ಮಾದೇವಿ, ಸುರೇಶ, ಚಂದ್ರೇಗೌಡ ಮತ್ತು ಮಂಜ. ನಾನು ನನ್ನ ಲಿಖಿತ ತಕರಾರು ಪತ್ರದಲ್ಲಿ ವಂಶವೃಕ್ಷಕ್ಕೆ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಂಜೇಗೌಡರಿಗೆ 7 ಜನ ಮಕ್ಕಳೆಂದರೆ ಸರಿಯಲ್ಲ. ನಂಜೇಗೌಡರವರ 7 ಜನ ಮಕ್ಕಳಲ್ಲಿ 3 ಜನ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿ 11 ಜನ ಮಕ್ಕಳಲ್ಲಿ ಕೇವಲ 3 ಜನ ಬದುಕಿದ್ದಾರೆ ಎಂದು ಉತ್ತರಿಸಿದ್ದಾರೆ, ಅವರೆಂದರೆ ಮಾದೇವಿ, ನಾಗರಾಜೇಗೌಡ ಮತ್ತು ಚಂದ್ರೇಗೌಡ ಅಲಿಯಾಸ್ ಚಂದ್ರು. ನಿಂಗರಾಜು, ರಾಮು ಮತ್ತು ಕೃಷ್ಣ ತೀರಿಕೊಂಡಿದ್ದಾರೆ ಎಂದರೆ ಸರಿ. 1 ನೇ ವಾದಿ ನನ್ನ ತಂದೆ ಎಂದರೆ ಸರಿ. ನನ್ನ ತಾತ ಕಾಫಿ ವರ್ಕ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಿಂಗರಾಜುರವರ ಮಕ್ಕಳು 4 ರಿಂದ 6 ನೇ ವಾದಿ ಎಂದರೆ ಸರಿ, ರಾಮರವರ ಮಕ್ಕಳು 7 ಮತ್ತು 8 ನೇ ವಾದಿ ಎಂದರೆ ಸರಿ, ಕೃಷ್ಣರವರ ಮಗ 9 ನೇ ವಾದಿ ಎಂದರೆ ಸರಿ.

ನನ್ನ ಅಜ್ಜಿ ಕಾಫಿ ವರ್ಕ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಬೇಕಾದಲ್ಲಿ ಹಾಜರುಪಡಿಸುತ್ತೇನೆಂದು ಉತ್ತರಿಸುತ್ತಾರೆ. ನನ್ನ ಅಜ್ಜಿ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಕಾಫಿ ವರ್ಕ್ ನ ಎದುರು ಇರುವ ಮುನೇಶ್ವರ ದೇವಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜಿ ಸ್ಟೋರ್ ಬೀದಿಯಲ್ಲಿ ವಾಸವಾಗಿದ್ದರು. ಅವರ ಮಕ್ಕಳು ಮೊಮ್ಮಕ್ಕಳು ಸ್ಟೋರ್ ಬೀದಿಯಲ್ಲಿ ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾತ ಖುದ್ದಾಗಿ ಕಾಫಿ ವರ್ಕ್ಸ್ ನಿಂದ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. ಆಗ ನನ್ನ ತಾತನಿಗೆ ಸಾಕಷ್ಟು ಹಣ ನಿವೃತ್ತಿ ವೇತನವಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಹಣದಿಂದ ದಿಃ28.04.1987 ರಂದು ನಿಂಗೇಗೌಡರವರಿಂದ ದಾವಾಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ಕೆಟ್ಟ ಚಟಗಳಿಗೆ ಒಳಗಾಗಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಅಜ್ಜಿಯ ಹೆಸರಿನಲ್ಲಿ ಖರೀದಿ

ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನ್ನ ಅಜ್ಜಿ ಅವರ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. 1 ರಿಂದ 3 ನೇ ವಾದಿ, ಹಾಗೂ ನಿಂಗರಾಜು, ರಾಮು ಮತ್ತು ಕೃಷ್ಣರವರು ಸಣ್ಣಪುಟ್ಟ ಹೋಟೆಲ್ ಗಳಲ್ಲಿ ಕೆಲಸ ಮಾಡಿ ಅದರಿಂದ ಬಂದ ಹಣವನ್ನು ನನ್ನ ತಾತ ಅಜ್ಜಿಗೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ಇಂದಿಗೂ ಸಹ ವಾದಿಗಳು ದಾವಾಸ್ತಿಯನ್ನು ವ್ಯವಸಾಯ ಮಾಡಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಅಜ್ಜಿಯನ್ನು ಪಿಂಚಣಿ ಮಾಡಿಸಲು ದಿಃ 23.01.2015 ರಂದು ಸಬ್ ರೆಜಿಸ್ಟ್ರರ್ ಕಛೇರಿಗೆ ಕರೆದುಕೊಂಡು ಹೋಗಿ ಮೋಸದಿಂದ ದಾನಪತ್ರವನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನ್ನ ಅಜ್ಜಿ ಸ್ವಇಚ್ಛೆಯಿಂದ ಮಾಡಿಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಅಜ್ಜಿಯ ಮಗಳು 2 ನೇ ಪ್ರತಿವಾದಿ ಮಾದೇವಿ ಎಂದರೆ ಸರಿ. ನಾನು ಮತ್ತು 2 ನೇ ಪ್ರತಿವಾದಿ ಮೋಸದಿಂದ ನನ್ನಜ್ಜಿಯನ್ನು ಸಬ್ ರೆಜಿಸ್ಟ್ರರ್ ಕಛೇರಿಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸದರಿ ದಾನಪತ್ರಕ್ಕೆ ಮೋಸದಿಂದ ಸಾಕ್ಷಿದಾರರಾಗಿ ಸಹಿಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತನ ಆಸ್ತಿಯಲ್ಲಿ 1 ನೇ ವಾದಿಗೆ ಎಷ್ಟು ಭಾಗ ಬರುತ್ತದೋ ಅಷ್ಟು ಭಾಗಕ್ಕೆ ಮಾತ್ರ ನನಗೆ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾಸ್ತಿ ನನ್ನ ಅಜ್ಜಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನಜ್ಜಿಗೆ ದಾವಾಸ್ತಿಯನ್ನು ಖರೀದಿ ಮಾಡಲು ಯಾವುದೇ ಆದಾಯವಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರಿಗೆ ಮನೆ ಬಾಡಿಗೆ, ಪಿಂಚಣಿ ಮತ್ತು ಕೆಲಸ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. ಮನೆ ಬಾಡಿಗೆ ನನ್ನ ಅಜ್ಜಿಯ ತವರು ಮನೆಯಿಂದ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಅಜ್ಜಿ ಪಿತ್ರಾರ್ಜಿತ ಆಸ್ತಿಯಿಂದ ಬಂದ ಹಣದಿಂದ ಹಾಗೂ ನನ್ನ ತಾತನ ನಿವೃತ್ತಿ ವೇತನದಿಂದ ದಾವಾಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಡಿ1 ನನ್ನ ಅಜ್ಜಿ ಖರೀದಿಸಿದ ಮೂಲ ಕ್ರಯಪತ್ರ. ನಿಡಿ3 ಕ್ಕೆ ನನ್ನ ಮತ್ತು 2 ನೇ ಪ್ರತಿವಾದಿಯ ಸಹಿಯನ್ನು ಹೊರತುಪಡಿಸಿ ನನ್ನ ಅಜ್ಜಿಯ ಪರಿಚಿತರು ಸಹಿಯನ್ನು ಹಾಕಿರುತ್ತಾರೆ. ನಿಡಿ3 ನ್ನು ಸಬ್ ರೆಜಿಸ್ಟರ್ ಕಛೇರಿಯವರು ತಯಾರು ಮಾಡಿರುತ್ತಾರೆ. ನಿಡಿ3 ನ್ನು ನನ್ನ ಅಜ್ಜಿಗೆ ಓದಿ ತಿಳಿಸಿರುತ್ತಾರೆ. ನಾನು ನಿಡಿ3 ನ್ನು ಸೃಷ್ಟಿಸಿರುತ್ತೇನೆ ಹಾಗೂ ಅದನ್ನು ಓದಿ ನನ್ನ ಅಜ್ಜಿಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 2015 ರಲ್ಲಿ ಖಾತೆಯಾಗಿರುತ್ತದೆ. ನಿಡಿ6 ರಲ್ಲಿ ನಮೂದಾಗಿರುವ ಬಸಪ್ಪ ಬಿನ್ ರಾಮಣ್ಣ ಯಾರು ಎಂದರೆ

ಗೊತ್ತಿಲ್ಲ. ನಿಡಿ7 ನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನಿಡಿ12 ರಲ್ಲಿ ನನ್ನ ಹೆಸರು ಇರುತ್ತದೆ. ನನ್ನ ಅಜ್ಜಿ ನನಗೆ ಯಾವುದೇ ದಾನಪತ್ರವನ್ನು ಬರೆದುಕೊಟ್ಟಿರುವುದಿಲ್ಲ, ನಾನು ಮೋಸದಿಂದ ಅದನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ

ನ್ಯಾಯಾಧೀಶರು, ಹುಣಸೂರು.